ಕರ್ನಾಟಕ ಸರ್ಕಾರ

# ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ

(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)

Government of Karnataka

# Karnataka Residential Educational Institutions Society

(An Organisation of Govt. of Karnataka)

ಸಂಖ್ಯೆ: ಕವಶಿಸಸ/ಶಿಕ್ಷಣ/ಆಡಳಿತ/ಸಿಆರ್-85/ಕೋ.ಕ/ಸಿ.ಜಾ.ಚಾ/2022-23 ದಿನಾಂಕ: 11-08-2022

## ಸುತ್ತೋಲೆ

ವಿಷಯ: ಸರ್ಕಾರದ ಆದೇಶದಂತೆ ಸಂಘದ ಅಧೀನದ ವಸತಿ ಶಾಲೆ/ಕಾಲೇಜುಗಳಲ್ಲಿ ಎಂ.ಓ.ಡಿ ಸಮಯವನ್ನು ಸಾಯಂಕಾಲ 5 ರಿಂದ 8.30 ರವರೆಗೆ ಪಾಲಿಸುವ ಬಗ್ಗೆ.

ಉಲ್ಲೇಖ: (1) ಕ.ವ.ಶಿ.ಸ.ಸಂ ವಸತಿ ಶಾಲೆಗಳ ನೌಕರರ ಸಂಘ (ರಿ), ಬೆಂಗಳೂರು ರವರ ಕಛೇರಿ ಪತ್ರ, ದಿನಾಂಕ: 11-08-2022

(2) ಸರ್ಕಾರದ ಆದೇಶ ಸಂಖ್ಯೆ: ಸಕಇ 626 ಮೊದೇಶಾ 2017 ಬೆಂಗಳೂರು, ದಿನಾಂಕ: 13-12-2017

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಪತ್ರದಲ್ಲಿ, ವಸತಿ ಶಾಲೆಗಳ ನೌಕರರ ಸಂಘ ಬೆಂಗಳೂರು ರವರು 2019-20ನೇ ಸಾಲಿನ ಜಾಬ್‌ಚಾರ್ಟ್‌ನಲ್ಲಿ ಎಂ.ಓ.ಡಿ ಕರ್ತವ್ಯದಲ್ಲಿ ಆಡಳಿತಾತ್ಮಕ ಜವಾಬ್ದಾರಿಗಳನ್ನು ಸೇರಿಸಲಾಗಿದೆ. ಇದರಿಂದ ಶಿಕ್ಷಕರಿಗೆ ಮಾನಸಿಕವಾಗಿ ಒತ್ತಡ ಹೆಚ್ಚಾಗಿ ಶೈಕ್ಷಣಿಕ ಅಭ್ಯಾಸಕ್ಕೆ ತೊಂದರೆಯಾಗುತ್ತಿದ್ದು ಹಾಗೂ ಶಿಕ್ಷಕರಿಗೆ ತರಗತಿಗಳ ಬೋಧನೆಗೆ ತೊಡಕಾಗುತ್ತಿದೆ. ಆದ್ದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಅಭ್ಯಾಸದ ದೃಷ್ಟಿಯಿಂದ ಎಂ.ಓ.ಡಿ ಸಮಯವನ್ನು ಉಲ್ಲೇಖ (2)ರ ಸರ್ಕಾರದ ಆದೇಶದಲ್ಲಿ ತಿಳಿಸಿರುವಂತೆ ಸಾಯಂಕಾಲ 5 ರಿಂದ 8.30 ರವರೆಗೆ ನಿಗಧಿಪಡಿಸುವಂತೆ ಕೋರಿ ಮನವಿ ಸಲ್ಲಿಸಿರುತ್ತಾರೆ.

ಮೇಲ್ಕಂಡ ಮನವಿಯನ್ನು ಪರಿಶೀಲಿಸಿ, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಉಲ್ಲೇಖ (2)ರ ಸರ್ಕಾರದ ಆದೇಶದಲ್ಲಿ ಈಗಾಗಲೇ ತಿಳಿಸಿರುವಂತೆ ಸಾಯಂಕಾಲ 5 ರಿಂದ ರಾತ್ರಿ 8.30 ರವರೆಗೆ ಶಿಕ್ಷಕರುಗಳನ್ನು ಎಂ.ಓ.ಡಿ ಕರ್ತವ್ಯಕ್ಕೆ ನೇಮಿಸಲು ಅಗತ್ಯ ಕ್ರಮವಹಿಸಲು ಈ ಮೂಲಕ ಸೂಚಿಸಿದೆ.

ಕಾರ್ಯನಿರ್ವಾಹಕ ನಿರ್ದೇಶಕರು

ಗೆ

ಎಲ್ಲಾ ವಸತಿ ಶಾಲಾ/ಕಾಲೇಜುಗಳ
ಪ್ರಾಂಶುಪಾಲರುಗಳಿಗೆ

**ಪ್ರತಿಯನ್ನು**

1. ಎಲ್ಲಾ ಜಿಲ್ಲೆಯ ಜಂಟಿ/ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ರವರಿಗೆ.

ನಂ.8, ಎಂ.ಎಸ್.ಬಿ.-1,6 ಮತ್ತು 7ನೇ ಮಹಡಿ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು - 560052. ದೂರವಾಣಿ : 080-22283366, 22265755, 22204466, 22207722 ಟೆಲಿಫ್ಯಾಕ್ಸ್ : 080-22262288
#8, M.S.B-1, 6th & 7th Floor, Cunningham Road, Bengaluru - 560052. Phone: 080-22283366, 22265755, 22204466, 22207722. Telefax: 080-22262288
Email : ed.kreis@ka.gov.in, Website: www.kreis.kar.nic.in

2. ಎಲ್ಲಾ ಜಿಲ್ಲೆಯ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ರವರಿಗೆ.
3. ಎಲ್ಲಾ ಜಿಲ್ಲೆಯ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರವರಿಗೆ.
4. ಎಲ್ಲಾ ಜಿಲ್ಲೆಯ ಜಿಲ್ಲಾ ಸಮನ್ವಯಾಧಿಕಾರಿಗಳು ರವರಿಗೆ.
5. ಕಂಪ್ಯೂಟರ್ ಶಾಖೆಗೆ – ಕ್ರೈಸ್ ವೆಬ್‌ಸೈಟ್ ಅಪ್ ಲೋಡ್ ಮಾಡಲು.
6. ಕಛೇರಿ ಪ್ರತಿ.

**<u>ಕರ್ನಾಟಕ ಸರ್ಕಾರದ ನಡವಳಿಗಳು</u>**

ವಿಷಯ: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ವಸತಿ ಶಾಲೆ/ಪಿ.ಯು ಕಾಲೇಜುಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಆಡಳಿತಾತ್ಮಕ/ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸುವ ಕುರಿತು.

ಓದಲಾಗಿದೆ: ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರ ಪತ್ರ ಸಂಖ್ಯೆ:ಕವಶಿಸಸ/ಆಪ್ತಶಾಖೆ/ಸಿಆರ್-14/2017-18, ದಿನಾಂಕ:11-10-2017

****

**<u>ಪ್ರಸ್ತಾವನೆ</u>**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಡಿ ಕಾರ್ಯನಿರ್ವಹಿಸುತ್ತಿರು ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಅಟಲ್ ಬಿಹಾರಿ ವಾಜಪೇಯಿ/ಡಾ|| ಬಿ.ಆರ್.ಅಂಬೇಡ್ಕರ್/ಏಕಲವ್ಯ/ಇಂದಿರಾಗಾಂಧಿ ವಸತಿ ಶಾಲೆ ಮತ್ತು ಕಾಲೇಜುಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಮಾಜ ಕಲ್ಯಾಣ ಇಲಾಖೆಯ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಆಡಳಿತಾತ್ಮಕ/ಆರ್ಥಿಕ ಅಧಿಕಾರವನ್ನು ಪ್ರತ್ಯಾಯೋಜಿಸಲು ಆಡಳಿತ ಮಂಡಳಿಯ ಸಭೆಯಲ್ಲಿ ನಿರ್ಧರಿಸಲಾಗಿದೆ. ಆಡಳಿತ ಮಂಡಳಿಯ ತೀರ್ಮಾನದಂತೆ ಅಧಿಕಾರ ಪ್ರತ್ಯಾಯೋಜಿಸಿ, ಆದೇಶ ಹೊರಡಿಸುವಂತೆ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರು ಮೇಲೆ ಓದಲಾದ ದಿನಾಂಕ:11-10-2017 ರಲ್ಲಿ ಕೋರಿರುತ್ತಾರೆ.

ಮೇಲಿನ ಅಂಶಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಸಕಇ 626 ಮೊದೇಶಾ 2017, ಬೆಂಗಳೂರು ದಿನಾಂಕ:13-12-2017</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಡಿ ಕಾರ್ಯನಿರ್ವಹಿಸುತ್ತಿರು ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಅಟಲ್ ಬಿಹಾರಿ ವಾಜಪೇಯಿ/ಡಾ|| ಬಿ.ಆರ್.ಅಂಬೇಡ್ಕರ್/ಏಕಲವ್ಯ/ಇಂದಿರಾಗಾಂಧಿ ವಸತಿ ಶಾಲೆ ಮತ್ತು ಕಾಲೇಜುಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಮಾಜ ಕಲ್ಯಾಣ ಇಲಾಖೆಯ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಅನುಬಂಧ 1,2,3 ಮತ್ತು 4 ರಲ್ಲಿ ಪಟ್ಟಿ ಮಾಡಿರುವ ಪ್ರಕರಣಗಳಿಗೆ ಆಡಳಿತಾತ್ಮಕ/ಆರ್ಥಿಕ ಅಧಿಕಾರವನ್ನು ಪ್ರತ್ಯಾಯೋಜಿಸಿ, ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

13/12/17
(ಪಿ.ಎನ್.ನಾಗರಾಜ್),
ಸರ್ಕಾರದ ಅಧೀನ ಕಾರ್ಯದರ್ಶಿ-1(ಪ್ರ),
ಸಮಾಜ ಕಲ್ಯಾಣ ಇಲಾಖೆ.

**<u>ಇವರಿಗೆ:</u>**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಇವರಿಗೆ ಮುಂದಿನ ರಾಜ್ಯಪತ್ರ ಸಂಚಿಕೆಯಲ್ಲಿ ಪ್ರಕಟಿಸಿ 300 ಪ್ರತಿಗಳನ್ನು ಒದಗಿಸಲು.

---2

ಗೆ:-

1) ಪ್ರಧಾನ ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ), ಬಹುಮಹಡಿ ಕಟ್ಟಡ, ಬೆಂಗಳೂರು.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಲ್ಯಾಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4) ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು
5) ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ) ವಿಕಾಸಸೌಧ, ಬೆಂಗಳೂರು.
6) ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ವಿಕಾಸಸೌಧ.
7) ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
8) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
9) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
10) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು.
11) ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
12) ನಿರ್ದೇಶಕರು, ಅಲ್ಪಾಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು.
13) ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
14) ಎಲ್ಲಾ ಜಿಲ್ಲಾಧಿಕಾರಿಗಳು-ಆಯುಕ್ತರ ಹಿಂ.ವ.ಕ ಇಲಾಖೆ, ಇವರ ಮುಖಾಂತರ
15) ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು- ಆಯುಕ್ತರ ಹಿಂ.ವ.ಕ ಇಲಾಖೆ ಇವರ ಮುಖಾಂತರ
16) ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನಾ ಮತ್ತು ತರಬೇತಿ ಸಂಸ್ಥೆ, ಬೆಂಗಳೂರು.
17) ಶಾಖಾರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿ ಮಾಹಿತಿಗಾಗಿ:-

1) ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಯವರು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ರವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
3) ಸರ್ಕಾರದ ಉಪ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ರವರ ಆಪ್ತ ಸಹಾಯಕರು, ವಿಕಾಸಸೌಧ, ಬೆಂಗಳೂರು.

****

ಸರ್ಕಾರದ ಆದೇಶ ಸಂಖ್ಯೆ: ಸಕಇ 628 ಮೊದೇಶಾ 2017, ಬೆಂಗಳೂರು,ದಿನಾಂಕ:13-12-2017ಕ್ಕೆ

ಅನುಬಂಧ-1

| ವಿಷಯ/ಅಂಶ | ಪ್ರತ್ಯಾಯೋಜಿಸಿದ ಅಧಿಕಾರಿಗಳು |
|---|---|
| 1)ವಸತಿ ಶಾಲೆ ಮತ್ತು ಕಾಲೇಜಿನ ಶಿಕ್ಷಕರು/ಉಪನ್ಯಾಸಕರು/ಬೋಧಕೇತರ ಸಿಬ್ಬಂದಿಗಳಿಗೆ - ಎ)ಸಾಂದರ್ಭಿಕ ರಜೆ ಮಂಜೂರಾತಿ<br>ಬಿ)ಪ್ರಾಂಶುಪಾಲರಿಗೆ - ಸಾಂದರ್ಭಿಕ ರಜೆ ಮಂಜೂರಾತಿ | ಎ)ಸಾಂದರ್ಭಿಕ ರಜೆ - ಸಂಬಂಧಿಸಿದ ವಸತಿ ಶಾಲಾ/ಕಾಲೇಜಿನ ಪ್ರಾಂಶುಪಾಲರು<br>ಬಿ)ಪ್ರಾಂಶುಪಾಲರಿಗೆ ಸಾಂದರ್ಭಿಕ ರಜೆ ಮಂಜೂರಾತಿ – ಸಂಬಂಧಿಸಿದ ಇಲಾಖೆಯ ಜಿಲ್ಲಾಮಟ್ಟದ ಅಧಿಕಾರಿಗಳು |
| 2) ವಸತಿ ಶಾಲೆ ಮತ್ತು ಕಾಲೇಜಿನ ಶಿಕ್ಷಕರು/ ಉಪನ್ಯಾಸಕರು ಬೋಧಕೇತರ ಸಿಬ್ಬಂದಿಗಳಿಗೆ-<br>ಎ)ಗಳಿಕೆರಜೆ/ಪಿತೃತ್ವ/ಮಾತೃತ್ವ/ಅರ್ಧವೇತನ ರಜೆ ಮಂಜೂರಾತಿ<br>ಬಿ)ಪ್ರಾಂಶುಪಾಲರಿಗೆ – ಗಳಿಕೆ/ಪಿತೃತ್ವ/ಮಾತೃತ್ವ ರಜೆ/ಅರ್ಧವೇತನ ರಜೆ ಮಂಜೂರಾತಿ | ಎ)ಗಳಿಕೆರಜೆ/ಪಿತೃತ್ವ/ಮಾತೃತ್ವ/ಅರ್ಧವೇತನ ರಜೆ ಮಂಜೂರಾತಿ – ಜಿಲ್ಲಾಮಟ್ಟದ ಇಲಾಖಾ ಅಧಿಕಾರಿಗಳು<br>ರಜೆ/ಅರ್ಧವೇತನ ರಜೆ ಮಂಜೂರಾತಿ– ಕಾರ್ಯನಿರ್ವಾಹಕ ನಿರ್ದೇಶಕರು |
| 3) ವಸತಿ ಶಾಲೆ ಮತ್ತು ಕಾಲೇಜಿನ ಶಿಕ್ಷಕರು/ ಉಪನ್ಯಾಸಕರು ಬೋಧಕೇತರ ಸಿಬ್ಬಂದಿಗಳಿಗೆ ಮತ್ತು ಪ್ರಾಂಶುಪಾಲರಿಗೆ - ವೈದ್ಯಕೀಯ/ವೇತನ ರಹಿತ ರಜೆ/ಅಸಾಧಾರಣ/ಸ್ಟಡಿ ಲೀವ್ ಮತ್ತು ಗಳಿಕೆರಜೆ ನಗಧೀಕರಣ ಮಂಜೂರಾತಿ ಇತ್ಯಾಧಿ. | ಕಾರ್ಯನಿರ್ವಾಹಕ ನಿರ್ದೇಶಕರು, ಕವಶಿಸಂಸ. |
| 4) ಎ) ವಸತಿ ಶಾಲೆ ಮತ್ತು ಕಾಲೇಜಿನ ಶಿಕ್ಷಕರು/ಉಪನ್ಯಾಸಕರು/ಬೋಧಕೇತರ ಸಿಬ್ಬಂದಿಗಳಿಗೆ- ಪ್ರಯಾಣಭತ್ಯೆ ಮಂಜೂರಾತಿ<br>ಬಿ) ಪ್ರಾಂಶುಪಾಲರಿಗೆ - ಪ್ರಯಾಣಭತ್ಯೆ ಮಂಜೂರಾತಿ | ಎ) ವಸತಿ ಶಾಲೆ ಮತ್ತು ಕಾಲೇಜಿನ ಶಿಕ್ಷಕರು/ಬೋಧಕೇತರ ಸಿಬ್ಬಂದಿಗಳಿಗೆ ಪ್ರಯಾಣಭತ್ಯೆ ಮಂಜೂರಾತಿ - ಪ್ರಾಂಶುಪಾಲರಿಂದ<br>ಬಿ) ಪ್ರಾಂಶುಪಾಲರಿಗೆ - ಪ್ರಯಾಣಭತ್ಯೆ ಮಂಜೂರಾತಿ - ಸಂಬಂಧಿಸಿದ ಇಲಾಖೆಯ ಜಿಲ್ಲಾಮಟ್ಟದ ಅಧಿಕಾರಿಗಳು |
| ವಸತಿ ಶಾಲೆ ಮತ್ತು ಕಾಲೇಜಿನ ಶಿಕ್ಷಕರು/ಬೋಧಕೇತರ ಸಿಬ್ಬಂದಿಗಳಿಗೆ ಮತ್ತು ಪ್ರಾಂಶುಪಾಲರಿಗೆ - ಹಬ್ಬದ ಮುಂಗಡ ಮತ್ತು ವೈದ್ಯಕೀಯ ವೆಚ್ಚದ ಮಂಜೂರಾತಿ | ಕಾರ್ಯನಿರ್ವಾಹಕ ನಿರ್ದೇಶಕರು, ಕವಶಿಸಂಸ. |
| 6) ಎ) ವಸತಿ ಶಾಲೆ ಮತ್ತು ಕಾಲೇಜಿನ ನಿಲಯಪಾಲಕರು ಮತ್ತು ಪ್ರಾಂಶುಪಾಲರು ಕೇಂದ್ರಸ್ಥಾನವನ್ನು (ವಸತಿ ಶಾಲೆ) ಬಿಡುವ ಬಗ್ಗೆ ಮಂಜೂರಾತಿ | ಎ) ಸಂಬಂಧಿಸಿದ ಇಲಾಖೆಯ ಜಿಲ್ಲಾಮಟ್ಟದ ಅಧಿಕಾರಿಗಳು (ಕೇಂದ್ರಸ್ಥಾನದಲ್ಲಿ ಅನಧಿಕೃತ ಗೈರುಹಾಜರಿದ್ದಲ್ಲಿ ಶಿಸ್ತುಕ್ರಮ ಜರುಗಿಸಲು ಕಾರ್ಯನಿರ್ವಾಹಕ ನಿರ್ದೇಶಕರು, ಕವಶಿಸಂಸ. ರವರಿಗೆ ವರದಿ ನೀಡುವುದು). |

13/12/17

(ಪಿ.ಎಸ್.ನಾಗರಾಜ್)

ಸರ್ಕಾರದ ಅಧೀನ ಕಾರ್ಯದರ್ಶಿ-1 (ಪ್ರ),

ಸಮಾಜ ಕಲ್ಯಾಣ ಇಲಾಖೆ

| | |
|---|---|
| ಬಿ) ಇತರೆ ಸಿಬ್ಬಂದಿ - ಕೇಂದ್ರಸ್ಥಾನವನ್ನು (ವಸತಿ ಶಾಲೆ/ಕಾಲೇಜು) ಬಿಡುವ ಬಗ್ಗೆ ಮಂಜೂರಾತಿ | ಬಿ) ಸಂಬಂಧಿಸಿದ ವಸತಿ ಶಾಲೆ/ಕಾಲೇಜಿನ ಪ್ರಾಂಶುಪಾಲರು (ಶಿಕ್ಷಕರು/ಇತರೆ ಸಿಬ್ಬಂದಿಗಳಿಗೆ ವಸತಿಗೃಹಗಳನ್ನು ಹಂಚಿಕೆಮಾಡಿದ್ದಲ್ಲಿ ಅಂತಹವರು ಕಡ್ಡಾಯವಾಗಿ ಕೇಂದ್ರಸ್ಥಾನದಲ್ಲಿ ಇರತಕ್ಕದ್ದು ಮತ್ತು ಕೇಂದ್ರಸ್ಥಾನದಲ್ಲಿ ಇರುವ ಬಗ್ಗೆ ಮುಚ್ಚಳಿಕೆ ಪಡೆದು ಸಿಬ್ಬಂದಿಗೆ ಪ್ರಥಮ ಆದ್ಯತೆ ಮೇರೆಗೆ ವಸತಿ ಗೃಹಗಳನ್ನು ಹಂಚಿಕೆ ಮಾಡುವುದು) |
| 7) ಎ) ವಸತಿ ಶಾಲೆ ಮತ್ತು ಕಾಲೇಜಿನ ಶಿಕ್ಷಕರು/ಉಪನ್ಯಾಸಕರು/ಬೋಧಕೇತರ ಸಿಬ್ಬಂದಿಗಳಿಗೆ - ವಾರ್ಷಿಕವೇತನ ಬಡ್ತಿ ಮಂಜೂರಾತಿ.<br><br>ಬಿ) ಪ್ರಾಂಶುಪಾಲರಿಗೆ - ವಾರ್ಷಿಕವೇತನ ಬಡ್ತಿ ಮಂಜೂರಾತಿ | ಎ) ಶಿಕ್ಷಕರು/ಉಪನ್ಯಾಸಕರು/ ಬೋಧಕೇತರ ಸಿಬ್ಬಂದಿಗಳಿಗೆ ವಾರ್ಷಿಕವೇತನ ಬಡ್ತಿ ಮಂಜೂರಾತಿ - ಪ್ರಾಂಶುಪಾಲರು<br><br>ಬಿ) ಪ್ರಾಂಶುಪಾಲರಿಗೆ ವಾರ್ಷಿಕವೇತನ ಬಡ್ತಿ ಮಂಜೂರಾತಿ - ಕಾರ್ಯನಿರ್ವಾಹಕ ನಿರ್ದೇಶಕರು, ಕವಶಿಸಂಸ. |
| 8) ಎ) ಹೊರಗುತ್ತಿಗೆ ಆಧಾರದ ಮೇಲೆ ಶಿಕ್ಷಕರು/ಸಿಬ್ಬಂದಿಗಳ ಸೇವೆ ಪಡೆಯುವ ಬಗ್ಗೆ.<br><br>ಬಿ) ಅತಿಥಿ ಶಿಕ್ಷಕರ ಸೇವೆ ಪಡೆಯುವ ಬಗ್ಗೆ | ಎ) ಸಂಬಂಧಿಸಿದ ಇಲಾಖೆಯ ಜಿಲ್ಲಾಮಟ್ಟದ ಅಧಿಕಾರಿಗಳು ಟೆಂಡರ್ ಮೂಲಕ ಸೇವೆಯನ್ನು ಪಡೆಯವುದು. ಆದರೆ ಹಾಜರಾತಿ ಆಧಾರದ ಮೇಲೆ ಹೊರಗುತ್ತಿಗೆ ಏಜೆನ್ಸಿಗೆ ನಿಗಧಿಪಡಿಸಿದ ದರಗಳಂತೆ ಪ್ರಾಂಶುಪಾಲರ ಶಿಫಾರಸ್ಸಿನ ಆಧಾರದ ಮೇಲೆ ಹಣ ಪಾವತಿಸುವುದು. ಪಿ.ಎಫ್/ಇ.ಎಸ್.ಐ. ಮತ್ತು ಜಿ.ಎಸ್. ಟ್ಯಾಕ್ಸ್‌ನ್ನು ಏಜೆನ್ಸಿಗಳು ಪಾವತಿಸಿದ ಬಗ್ಗೆ ಧೃಡಪಡಿಸಿಕೊಂಡ ನಂತರವೇ ಹಣ ಪಾವತಿಮಾಡತಕ್ಕದ್ದು. ತಪ್ಪಿದಲ್ಲಿ, ನಿಯಮಾನುಸಾರ ಜಿಲ್ಲಾಮಟ್ಟದ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುವುದು.<br><br>ಬಿ) ಅತಿಥಿ ಶಿಕ್ಷಕರ ಸೇವೆ ಪಡೆಯುವ ಬಗ್ಗೆ - ಪ್ರಾಂಶುಪಾಲರು ಮತ್ತು ಜಿಲ್ಲಾಮಟ್ಟದ ಅಧಿಕಾರಿಗಳು ಜಂಟಿಯಾಗಿ ನೇಮಿಸುವುದು ಮತ್ತು ಹಣ ಪಾವತಿಸುವುದು. |
| 9) ಶಿಕ್ಷಕರನ್ನು MOD ಕರ್ತವ್ಯಕ್ಕೆ ನೇಮಿಸುವುದು. ಸಾಯಂಕಾಲ 5.00 ರಿಂದ 8.30ರವರೆಗೆ ಪ್ರತಿ ದಿನ ಒಬ್ಬ ಶಿಕ್ಷಕರಂತೆ | ಪ್ರಾಂಶುಪಾಲರು ನೇಮಿಸುವುದು |
| 10) ವಸತಿ ಶಾಲೆ ಪ್ರಾಂಶುಪಾಲರು 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೆ/ ಕಾಲೇಜಿನ ಪ್ರಾಂಶುಪಾಲರು ತಮ್ಮ ವಿಷಯಗಳಲ್ಲಿ ಪ್ರತಿ ದಿನ ಕನಿಷ್ಠ ಎರಡು ಅವಧಿ ಪಾಠ ಬೋಧನೆ ಮಾಡುವುದು ಕಡ್ಡಾಯ | ಇಲಾಖೆಯ ಜಿಲ್ಲಾಮಟ್ಟದ ಅಧಿಕಾರಿಗಳು ಈ ಬಗ್ಗೆ ಕ್ರಮವಹಿಸುವುದು |
| 11) ತುರ್ತು ಸಂದರ್ಭಗಳಲ್ಲಿ ವಸತಿ ಶಾಲೆ/ಕಾಲೇಜಿನ ಪ್ರಾಂಶುಪಾಲರನ್ನು ಸೇರಿಸಿ ಎಲ್ಲಾ ಸಿಬ್ಬಂದಿಗಳನ್ನು ಬೇರೆ ಶಾಲೆ/ಕಾಲೇಜುಗಳಿಗೆ ತಾತ್ಕಾಲಿಕವಾಗಿ ನಿಯೋಜಿಸುವುದು | ಇಲಾಖೆಯ ಜಿಲ್ಲಾಮಟ್ಟದ ಅಧಿಕಾರಿಗಳು ಮೌಖಿಕ/ಲಿಖಿತ ಅನುಮತಿಯನ್ನು ಕಾರ್ಯನಿರ್ವಾಹಕ ನಿರ್ದೇಶಕರಿಂದ ಪಡೆದು ನಿಯೋಜಿಸಿ ವರದಿ ಮಾಡುವುದು |
| 12) ಸ್ಥಳೀಯ ದೂರುಗಳು ಪತ್ರಿಕಾ ವರದಿಗಳ ಇತ್ಯಾದಿ ಸಮಸ್ಯೆಗಳ ಬಗ್ಗೆ ಕ್ರಮ | ಸಂಬಂಧಿಸಿದ ಜಿಲ್ಲಾಮಟ್ಟದ ಅಧಿಕಾರಿಗಳು ಇವುಗಳ ಬಗ್ಗೆ ವಿಚಾರಣೆ ಮಾಡಿ ಸೂಕ್ತ ವರದಿಗಳನ್ನು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸುವುದು. |

13/12/17
(ಪಿ.ಎನ್.ನಾಗರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ-1 (ಪ್ರ),
ಸಮಾಜ ಕಲ್ಯಾಣ ಇಲಾಖೆ